ನಡೆಸು. ಯಾವಳಿಗೆ ಬೇಕು ನಿನ್ನ ಜೊತೆಗೆ ಸಂಸಾರ' ಎಂದು ಫೋನಿನಲ್ಲಿ ಬೈದಿದ್ದು ಅವನ ಎದೆಯೊಳಗೆ ಬೆಂಕಿಕೆಂಡಗಳನ್ನೇ ಇಟ್ಟಹಾಗೆ ಆಗಿತ್ತು. ಅಂತೂ ಹೆಚ್ಚೂಕಡಿಮೆ ಈ ಎರಡು ಹೋಟೆಲ್‌ಗಳ ಮುಂದೆ ಜನ ಕಿಕ್ಕಿರಿದು ತುಂಬಿಹೋಯ್ತು. ಆ ಊರಿನ ಜನ ಯಾರು ಬೇರೆ ಊರಿನವರು ಯಾರು ಎಂದು ಗುರುತು ಸಿಗದೇ ಹೋಯ್ತು. ಸಣ್ಣ ಹೈಕ್ಳು ಕ್ಲಾಸುಗಳಿಗೆ ಚಕ್ಕರು ಹೊಡೆದು ಹೋಟೆಲ್ ಹತ್ತಿರ ನಿಂತು ವಿಚಿತ್ರ ಶೈಲಿಯ ಗಡ್ಡಧಾರಿಗಳನ್ನು, ಜುಬ್ಬಾಧಾರಿಗಳನ್ನು, ಹೆಗಲಿಗೆ ಲ್ಯಾಪ್‌ಟಾಪ್ ಬ್ಯಾಗ್‌ಗಳನ್ನು ನೇತು ಹಾಕಿ ಕೊಂಡು ಇಂಗ್ಲಿಷ್, ಕನ್ನಡ, ಹಿಂದಿ ಭಾಷೆಗಳಲ್ಲಿ ಮಾತಾಡುತ್ತಿರುವವರನ್ನು ಕುತೂಹಲದಿಂದ ನೋಡಿದರು. ಅವರು ಎಲ್ಲಿಗೆ ಹೋದರೆ ಅವರ ಹಿಂದೆನೇ ಸುತ್ತಾಡತೊಡಗಿದರು. ಕ್ಲಾಸುಗಳು ಖಾಲಿಯಾಗಿ ಬಣಬಣವೆನ್ನತೊಡಗಿದಾಗ ಲೋಹದ ಪ್ರಾಣಿಯ ಎಫೆಕ್ಟ್ ಸ್ಕೂಲಿಗೂ ಬಡಿದಿತ್ತು. ಸಿದ್ದಯ್ಯಸ್ವಾಮಿ. ರಾಚಯ್ಯ, ಮಹಾಲಿಂಗಪ್ಪ, ಶಂಕರನಾರಾಯಣ ರೆಡ್ಡಿ ಮೇಷ್ಟ್ರುಗಳು ಕುಂತು ಕುಂತು ಸಾಕಾಗಿ ಬನಶಂಕರಪ್ಪನ ಹೋಟೆಲ್‌ಗೆ ಬಂದು ಟೀ ಕುಡಿಯುತ್ತಾ ಜಿಂಕೆಯ ಚರ್ಚೆಯಲ್ಲಿ ಭಾಗವಹಿಸಿದರು. ಆ ಊರಿನ ಲೈನ್‌ಮ್ಯಾನ್ ಕೆಂಡಗಣ್ಣದಯ್ಯ, 'ಮೇಷ್ಟ್ರೇ ಅದು ಎಷ್ಟನೇ ಇಸ್ವಿದು ಇರಬಹುದು? ಯಾರಾದರೂ ಮಾಟ ಮಾಡಿಸಿ ಇಟ್ಟಿದ್ದರೋ ಇಲ್ಲಾ ಯಾರಾದರೂ ಡಕಾಯಿತರು ಹೂತಿದ್ದರೋ? ಎಂದು ಹಿಸ್ಟರಿ ಮೇಷ್ಟ್ರು ಸಿದ್ದಯ್ಯಸ್ವಾಮಿಯನ್ನು ಕೇಳಿದ. 'ಆ ಮರನೇ ನಾನೂರು ಐನೂರು ವರ್ಷದ್ದು ಎಂದು ಹೇಳುತ್ತಾರೆ. ಹಾಗಾಗಿ ಅದಕ್ಕೂ ಹಿಂದಿನದು ಅನ್ನಿಸುತ್ತೆ. ಯಾಕೆ ಅಲ್ಲಿ ಹೂತಿದ್ದರೋ ಏನೋ? ಅವಾಗಲೇ ಅದನ್ನು ಬಡಬಗ್ಗರಿಗೆ ಇಷ್ಟಿಷ್ಟು ಹಂಚಿದ್ದರೆ ಈ ಹೊತ್ತು ಹೀಗಾಗುತ್ತಿರಲಿಲ್ಲ' ಎಂದರು. ಅಲ್ಲೇ ಇದ್ದ ಭಜನೆ ರಾಮಶಂಕರಪ್ಪ, 'ಇನ್ನೂ ಆಳಕ್ಕೆ ಅಗೆದರೆ ಮತ್ತಿನ್ನೇನಾದರೂ ಸಿಗಬಹುದು. ಯಾಕಂದರೆ ನಮ್ಮ ತಾತ ವಾಲೇಕರ ರಂಗಶಂಕರಜ್ಜ ಹೇಳುತ್ತಿದ್ದರು. ನನಗೆ ಇನ್ನೂ ನೆನಪಿದೆ. ನಾನಿನ್ನೂ ಚಿಕ್ಕವನು ಆಗ. ಲೇ ಶಂಕ್ರಿ ಆ ಆಲದ ಮರದ ಹತ್ತಿರ ಒಬ್ಬನೇ ಹೋಗಬೇಡವ್ರೋ. ಅದರೊಳಗೆ ಮುನಿಗಳು ತಪಸ್ಸು ಮಾಡ್ತಾ ಅವ್ರೆ. ಸಾವಿರಾರು ವರ್ಷಗಳಿಂದ ಮಾಡ್ತಾನೆ ಅವ್ರೆ. ಹೋಗಿ ಗಲಾಟೆ ಗಿಲಾಟೆ ಮಾಡಿದಿರಿ ಅಂದರೆ ಶಾಪ ಕೊಡುತ್ತಾರೆ. ಆಮೇಲೆ ಇರುವ ಕಣ್ಣುಗಳನ್ನು ಕಳೆದುಕೊಳ್ಳಬೇಕಾಗುತ್ತೆ. ಅವರು ಸರೀ ರಾತ್ರಿ ಒಬ್ಬರೇ ಮರದ ಒಳಗಿಂದ ಕೆಳಗಡೆ ಹೋಗಿ ಅಲ್ಲಿ ಹರಿಯುತ್ತಿರುವ ಶಿವನಿ ನದಿಯಲ್ಲಿ ಮಿಂದು ಪಾತಾಳ ನಾಗೇಶ್ವರ ದೇವಸ್ಥಾನಕ್ಕೆ ಹೋಗಿ ಪೂಜೆ

